ಪಿ ಡಬ್ಲ್ಯೂ ಃ 1

ದಿನಾಂಕ 28-11-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಸಿ ವಕೀಲರಿಂದ ಪ್ರತಿವಾದಿ ಪರಃ

ಮೊದಲ ಬಾರಿಗೆ ಶೋಭ ಕೋಂ ಗುಡ್ಡಪ್ಪ ಕಾಳಿ ಎಂದು ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ 3 ಸಲ ಮಾಡಿದ್ದೇನೆ ಎನ್ನುತ್ತಾರೆ. ದಾವೆಗೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ತಂದೆ ತಾಯಿ ಜೀವಂತ ಇದ್ದಾರೆ. ನನ್ನ ಮದುವೆಯ ಸಮಯದಲ್ಲೂ ಅವರು ಜೀವಂತ ಇದ್ದರು. ನಾನು ಯಾವುದೇ ದಾಖಲೆಗಳಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ರಾಣೇಬೆನ್ನೂರಿನ ಉಪ ನೊಂದಾಣಾಧಿಕಾರಿ ಕಚೇರಿಯಲ್ಲಿ ದಾಖಲೆಗೆ ಸಹಿ ಮಾಡಿದಾಗ ನನ್ನ ತಂದೆ ತಾಯಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗಳು ಸದರಿ ಕಚೇರಿಯಲ್ಲಿ ದಾಖಲೆಗೆ ಸಹಿ ಮಾಡಿದ್ದಾರೆ. ನನ್ನ ಸಂಬಂಧಿಕರು ಸದರಿ ದಾಖಲೆಗೆ ಸಹಿ ಮಾಡಿಲ್ಲ. ಗುರುಬಸಪ್ಪ ಗೊಲ್ಲಾರ, ಹೇಮಪ್ಪ ಗೊಲ್ಲಾರ, ಕರಿಯಪ್ಪ ಹುಬ್ಬಳ್ಳಿ, ಇವರುಗಳು ಸಹಿ ಮಾಡಿದ್ದಾರೆ. ನನ್ನ ಮದುವೆಯಾದ ದಿನಾಂಕ ನೆನಪಿಲ್ಲ. ಯಾವ ವಾರ ಮದುವೆಯಾಗಿದೆ ಎಂದರೆ ಸಾಕ್ಷಿ ದಿಃ 22-04-2000 ರಂದು ಮದುವೆ ಆಗಿದೆ ಎನ್ನುತ್ತಾರೆ. ನ್ಯಾಯಾಲಯದ ಪ್ರಶ್ನೆಗೆ ಸಾಕ್ಷಿ ಮದುವೆ ನೊಂದಣಿ ಪತ್ರಕ್ಕೆ ಸಹಿ ಮಾಡಿದ್ದೇನೆ ಎನ್ನುತ್ತಾರೆ. ನನ್ನ ಮದುವೆಯ ಲಗ್ನ ಪತ್ರಿಕೆಯನ್ನು ಮುದ್ರಿಸಲಾಗಿತ್ತು. ಆ ಲಗ್ನ ಪತ್ರಿಕೆಯನ್ನು ಸಲ್ಲಿಸಿಲ್ಲ. ಗುಡ್ಡಪ್ಪ ಕಾಳಿ ಎಂಬುವವರು ನನ್ನನ್ನು ಲಗ್ನ ಮಾಡಿಕೊಂಡಿದ್ದಾರೆ. ದಿಃ 22-04-2000 ರಲ್ಲಿ ಮದುವೆಯಾಗಿದೆ. ಮದುವೆಯ ಸಂಬಂಧ ನಾನು ವರದಿ ನೀಡಿದ್ದೇನೆ, ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಉಪ ನೊಂದಾಣಾಧಿಕಾರಿ ಕಚೇರಿಯಲ್ಲಿ ನಾನು, ಗುಡ್ಡಪ್ಪ ಕಾಳಿ, ಹಾಗೂ ಮೇಲೆ ಹೇಳಿದ ನಮ್ಮ ಗ್ರಾಮಸ್ಥರು ಮಾತ್ರ ಇದ್ದೇವು. ನನ್ನ ಪತಿ 2006 ರಲ್ಲಿ ಮೃತ ಪಟ್ಟಿದ್ದಾರೆ. ಮರಣ ಪ್ರಮಾಣ ಪತ್ರವನ್ನು ಎಂ ಎಸ್ ರಾಮಯ್ಯ ಆಸ್ಪತ್ರೆಯಿಂದ ಪಡೆದಿದ್ದೇನೆ.

(ಮುಂದುವರೆದ ಪಾಟೀ ಸವಾಲನ್ನು ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.